# ಹೊಸತು

## ಶೈನ್ & ಶಿಮ್ಮರ್ ಕಲೆಕ್ಷನ್



ಹೊಸ ಋತುವಿನ ಪಾರ್ಟಿಯಲ್ಲಿ ಎಲ್ಲರ ಕಣ್ಸೆಳೆಯಲು 109'ಎಫ್ ಆಕರ್ಷಕ ವಿನ್ಯಾಸದ ಪಾರ್ಟಿವೇರ್‌ಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ವಾರ್ಡ್‌ರೋಬ್ ಕಲೆಕ್ಷನ್‌ಗೆ ಇದು ಉತ್ತಮ ಆಯ್ಕೆಯಾಗಿದೆ.

ನವೀನ ವಿನ್ಯಾಸ ಮತ್ತು ಆಯ್ದ ಬಣ್ಣಗಳಲ್ಲಿ ಲಭ್ಯವಿರುವ ಶೈನ್ & ಶಿಮ್ಮರ್ ಕಲೆಕ್ಷನ್, ನಿಮ್ಮ ವ್ಯಕ್ತಿತ್ವಕ್ಕೆ ಮೆರುಗು ನೀಡುತ್ತದೆ ಎಂದು ಕಂಪೆನಿ ಹೇಳುತ್ತದೆ.

ಬೆಲೆ 2199 ರೂಪಾಯಿಗಳಿಂದ ಆರಂಭ.

ಮಾಹಿತಿಗೆ : 09820224440

## ಲ್ಯಾಕ್ಮೆ ಮಾಯಿಶ್ಚರೈಸರ್




ಸೌಂದರ್ಯವರ್ಧಕ ಉತ್ಪನ್ನಗಳ ತಯಾರಕ ಲಾಕ್ಮೆ ಚಳಿಗಾಲದಲ್ಲಿ ತ್ವಚ್ಛೆಯ ರಕ್ಷಣೆಗೆ ಪೀಚ್ ಮಿಲ್ಕ್ ಮಾಯಿಶ್ಚರೈಸರ್ ಹೊರತಂದಿದೆ.

ಇದು ತ್ವಚ್ಛೆಗೆ ಹೊಳಪನ್ನು ನೀಡುವುದರ ಜೊತೆಗೆ ಕಾಂತಿಯುತವಾಗಿಸುತ್ತದೆ. ಹಣ್ಣಿನ ವಿಟಮಿನ್ ಸತ್ವ ಮತ್ತು ಹಾಲಿನ ಅಂಶವನ್ನು ಇದು ಹೊಂದಿದ್ದು, ಚಳಿಗಾಲದಲ್ಲಿ ಮಾಯಿಶ್ಚರೈಸರ್‌ಗೆ ಸೂಕ್ತ ಆಯ್ಕೆ ಎಂದು ಕಂಪೆನಿ ಹೇಳಿದೆ.

60 ಎಂಎಲ್ ಬಾಟಲಿಗೆ 100 ರೂಪಾಯಿ.

ಮಾಹಿತಿ: 09819721919

## ಫೆರೊಲಿ ವಾಟರ್ ಹೀಟರ್

ಬಿಸಿನೀರಿನ ಸ್ನಾನಕ್ಕಾಗಿ ಫೆರೊಲಿ 3 ಹೊಸ ಮಾದರಿಯ ವಾಟರ್ ಹೀಟರ್‌ಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಆಧುನಿಕ ತಂತ್ರಜ್ಞಾನ ಬಳಸಿ ಇದನ್ನು ತಯಾರಿಸಲಾಗಿದ್ದು, ವಿದ್ಯುತ್ ಉಳಿತಾಯವಾಗುತ್ತದೆ. ಉತ್ತಮ ವಿನ್ಯಾಸ ಮತ್ತು ಬಳಕೆದಾರ ಸ್ನೇಹಿಯಾದ ಫೆರೊಲಿ ವಾಟರ್ ಹೀಟರನ್ನು ವೈ-ಫೈ ಮತ್ತು ಸ್ಮಾರ್ಟ್‌ಫೋನ್ ಬಳಸಿ ನಿರ್ವಹಿಸಬಹುದು.




ಬಿಳಿ ಮತ್ತು ಐವರಿ ಬಣ್ಣಗಳ ಆಯ್ಕೆಗಳಿವೆ. ಬೆಲೆ 3000 ರೂಪಾಯಿಗಳಿಂದ ಆರಂಭ.

ಮಾಹಿತಿಗೆ : 9980773466

## ಬ್ರಿಟಾನಿಯ ನ್ಯೂಟ್ರಿಚಾಯ್ಸ್

ತಿಂಡಿ ತಿನಿಸುಗಳಿಗೆ ಹೆಸರಾದ ಬ್ರಿಟಾನಿಯ, ನ್ಯೂಟ್ರಿಚಾಯ್ಸ್ ಹೆವನ್ಸ್ ಎಂಬ ಕುಕೀಸ್‌ಗಳನ್ನು ಬಿಡುಗಡೆಗೊಳಿಸಿದೆ.

ಎರಡು ಹೊಸ ಸ್ವಾದಗಳನ್ನು ಇಲ್ಲಿ ಪರಿಚಯಿಸಲಾಗಿದ್ದು, ಕ್ರ್ಯಾನ್‌ಬೆರ್ರಿ ಮತ್ತು ಓಟ್ಸ್‌ನ ಮಿಶ್ರಣವಿದೆ. ಬಾದಾಮಿ, ಬಾಳೆಹಣ್ಣನ್ನು ಒಳಗೊಂಡ ಕುಕೀಸ್ ಇದಾಗಿದ್ದು, ಎಲ್ಲರ ಮೆಚ್ಚುಗೆಯ ತಿನಿಸಾಗಲಿದೆ ಎಂದು ಕಂಪೆನಿ ಹೇಳಿದೆ. ಉತ್ತಮ ಗುಣಮಟ್ಟದ ಪ್ಯಾಕಿಂಗ್‌ನಿಂದಾಗಿ ತಾಜಾ ಸ್ವಾದ ದೊರೆಯುತ್ತದೆ. 100 ಗ್ರಾಂ ಪ್ಯಾಕ್ ಬೆಲೆ 50 ರೂಪಾಯಿ.

ಮಾಹಿತಿಗೆ: 09538757922




## ಬೀಟ್ಸ್ ಸೋಲೊ 2




ಸಂಗೀತ ಮತ್ತು ಆಡಿಯೋವನ್ನು ಆನಂದಿಸಲು ಬೀಟ್ಸ್ ಕಂಪೆನಿ ಇದೀಗ ಬೀಟ್ಸ್ ಸೋಲೊ 2 ವೈರ್‌ಲೆಸ್ ಹೆಡ್‌ಫೋನ್ ಹೊರತಂದಿದೆ. ಅತ್ಯಂತ ಸ್ಪಷ್ಟ ಧ್ವನಿ ಇದರ ವಿಶೇಷವಾಗಿದ್ದು, ಬ್ಲೂಟೂತ್ ಮೂಲಕ ಫೋನ್ ಸಂಪರ್ಕ ಮಾಡುತ್ತದೆ. ಯುಎಸ್‌ಬಿ ಚಾರ್ಜಿಂಗ್ ಮೂಲಕ ಇದರ ಬ್ಯಾಟರಿ ಒಮ್ಮೆ ಚಾರ್ಜ್ ಮಾಡಿದರೆ 20 ಗಂಟೆಗಳ ಕಾಲ ಸಂಗೀತ ಕೇಳಬಹುದು. ಮೈಕ್ ಕೂಡಾ ಇದ್ದು, ಮಧ್ಯೆ ಕರೆ ಬಂದರೆ ಉತ್ತರಿಸಲು ಅನುಕೂಲ.

ಕಪ್ಪು, ಬಿಳಿ ಮತ್ತು ನೀಲಿ ಬಣ್ಣಗಳಲ್ಲಿ ಲಭ್ಯ.

ಬೆಲೆ 18,000 ರೂಪಾಯಿ. ವಿವರಗಳಿಗೆ: www.beatsbydre.com

## ಬೆಲ್‌ಗ್ರೇವಿಯ ವ್ಯಾಲೆಟ್

ಲಾಪಿಸ್ ಬಾರ್ಡ್ ಪುರುಷರಿಗಾಗಿ ಹೊಸ ವಿಧದ ಬೆಲ್‌ಗ್ರೇವಿಯ ಲೆದರ್ ವ್ಯಾಲೆಟ್‌ಗಳನ್ನು ಹೊರತಂದಿದೆ. ದಿನನಿತ್ಯದ ಬಳಕೆಗೆ ಇದು ಸೂಕ್ತವಾಗಿದ್ದು, ಉತ್ತಮ ಗುಣಮಟ್ಟದ ಲೆದರ್‌ನಿಂದ ತಯಾರಿಸಲಾಗಿದೆ. ಕ್ರೆಡಿಟ್ ಕಾರ್ಡ್ ಮತ್ತು ಇತರ ಕಾರ್ಡ್‌ಗಳನ್ನು ಇಡಲು ಅನುಕೂಲವಾಗುವಂತೆ ವಿನ್ಯಾಸ ಮಾಡಿದ್ದು, ಹೆಚ್ಚು ಬಾಳಿಕೆ ಬರುತ್ತದೆ ಎಂದು ಕಂಪೆನಿ ಹೇಳಿದೆ.



ಬೆಲೆ 5500 ರೂಪಾಯಿಗಳಿಂದ ಆರಂಭ.

ಮಾಹಿತಿಗೆ : 9972875644